2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ರಾಮನಗರ, ಕನಕಪುರದಲ್ಲಿ
S.C.5027/2022

| | | |
|---|---|---|
| ಪಿರ್ಯಾದಿ | | ಸಾತನೂರು ಪೊಲೀಸ್ ಠಾಣೆ |
| | | ವಿರುದ್ಧ |
| ಆರೋಪಿ | 1 | ರತ್ನಮ್ಮ,<br>ಕೋಂ ಲೇಟ್ ನಿಂಗಪ್ಪ,<br>ವಯಸ್ಸು 47 ವರ್ಷ, |
| | 2 | ಶಿಲ್ಪಾ ಕೆಮ್ಮಾಳೆ<br>ಬಿನ್ ಲೇಟ್ ನಿಂಗಪ್ಪ,<br>ವಯಸ್ಸು 29 ವರ್ಷ, |
| | 3 | ಪುಷ್ಪ ಕೆ.ಎಲ್.,<br>ಬಿನ್ ಲೇಟ್ ಶಿವಣ್ಣ,<br>ವಯಸ್ಸು 25 ವರ್ಷ, |
| | 4 | ಅಭಿಷೇಕ್<br>ಬಿನ್ ನಿಂಗಪ್ಪ,<br>ವಯಸ್ಸು 21 ವರ್ಷ,<br>ಆರೋಪಿ-1 ರಿಂದ 4 ರವರ ವಾಸಃ-<br>ಕೆಮ್ಮಾಳೆ ಗ್ರಾಮ,<br>ಸಾತನೂರು ಹೋಬಳಿ,<br>ಕನಕಪುರ ತಾಲ್ಲೂಕು,<br>ರಾಮನಗರ. |
| | 5 | ಕೇಶವಮೂರ್ತಿ<br>ಬಿನ್ ದೊಡ್ಡರಾಮೇಗೌಡ<br>40 ವರ್ಷ, |

| | | |
|---|---|---|
| | 6 | ಇಂದ್ರಮ್ಮ<br>ಕೋಂ. ಕೇಶವಮೂರ್ತಿ,<br>ವಯಸ್ಸು 35 ವರ್ಷ,<br>ಆರೋಪಿ-5 ಮತ್ತು 6 ರವರ ವಾಸಃ-<br>ತೋಟಹಳ್ಳಿ ಗ್ರಾಮ,<br>ಸಾತನೂರು ಹೋಬಳಿ,<br>ಕನಕಪುರ ತಾಲ್ಲೂಕು,<br>ರಾಮನಗರ. |

**<u>ದೋಷಾರೋಪಣೆ</u>**

ನಾನು ಶ್ರೀ ಕುಮಾರ್.ಹೆಚ್.ಎನ್., ಬಿ.ಎ.ಎಲ್., ಎಲ್‌ಎಲ್.ಬಿ., 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ, ಕನಕಪುರದಲ್ಲಿ., ಈ ಮೂಲಕ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪ ಮಾಡುತ್ತೇನೆ.

* * * * *

ದಿಃ09.05.2020 ರಂದು ಮಧ್ಯಾಹ್ನ 1-30 ಗಂಟೆಗೆ ಆರೋಪಿ-3 ಪುಷ್ಪಾರವರನ್ನು ಚಾಸಾ-4 ಕೌಶಿಕ್ @ ಪುಟ್ಟರವರು ಮದುವೆ ಮಾಡಿಕೊಳ್ಳಬೇಕೆಂದು ಈ ಹಿಂದಿನಿಂದಲೂ ತಕರಾರು ಇದ್ದು, ಈ ವಿಚಾರದಲ್ಲಿ ದ್ವೇಷವಿಟ್ಟುಕೊಂಡು ಆರೋಪಿತರಾದ ನೀವುಗಳು ಕೆಎ-02-ಎಂಜಿ-4986 ಟೊಯೋಟಾ ಇನ್ನೊವಾ ಕಾರಿನಲ್ಲಿ ಚಾಸಾ-1 ರೂಪರವರ ವಾಸದ ಮನೆಯ ಬಳಿ ಬಂದು ಕಾನೂನು ಬಾಹಿರ ಸದಸ್ಯರಾಗಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 143 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಎರಡನೆಯದಾಗಿ, ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-2 ಮತ್ತು 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಮನೆಯ ಬಳಿ ಗಲಭೆ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಮೂರನೆಯದಾಗಿ ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-2 ಮತ್ತು 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಮನೆಯ ಬಳಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ನಾಲ್ಕನೆಯದಾಗಿ ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-1 ರವರ ಮನೆಯ ಬಳಿ ಬಂದು ಮನೆಯ ಗೇಟಿನ ಬೀಗ ಮತ್ತು ಮನೆಯ ಕಿಟಕಿ ಗಾಜುಗಳನ್ನು ಒಡೆದು ಹಾಕಿ 1000/- ರೂಪಾಯಿಗಳಷ್ಟು ನಷ್ಟ ಉಂಟು ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಐದನೆಯದಾಗಿ ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-2 ಮತ್ತು 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದಲ್ಲಿ ಎಸಗಿರುತ್ತೀರಿ.

ಆರನೆಯದಾಗಿ ಸದರಿ ದಿನ ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-2 ಮತ್ತು 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ-4 ಕೌಶಿಕ್ @ ಪುಟ್ಟ ರವರನ್ನು ಆರೋಪಿ-3 ಶಿಲ್ಪಾರವರ ಜೊತೆ ವಿವಾಹ ಮಾಡಿಕೊಳ್ಳಲು ಕಳುಹಿಸಿಕೊಡಿ ಎಂದು ಚಾಸಾ-1 ರಿಂದ 3 ರವರಿಗೆ ಕೊಲೆ ಬೆದರಿಕೆ ಹಾಕಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಏಳನೆಯದಾಗಿ ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-2 ರಿಂದ 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ-2 ಮತ್ತು 3 ರವರಿಗೆ ಕೈಗಳಿಂದ ಮನಬಂದಂತೆ ಮೈಕೈಗೆಲ್ಲಾ ಹೊಡೆದು ಗಾಯವನ್ನುಂಟು ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಎಂಟನೆಯದಾಗಿ ಸದರಿ ದಿನ ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-2 ಮತ್ತು 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-4 ರವರನ್ನು ಆರೋಪಿ-3 ರವರ ಜೊತೆ ಮದುವೆ ಮಾಡಿಕೊಳ್ಳಲು ಕಳುಹಿಸಿಕೊಡಿ ಎಂದು ಚಾಸಾ-1 ರಿಂದ 3 ರವರಿಗೆ ಬೆದರಿಕೆ ಹಾಕಿ ಚಾಸಾ-4 ರವರನ್ನು ಮನೆಯಿಂದ ಹೊರಗೆ ಎಳೆದುಕೊಳ್ಳುತ್ತಿದ್ದಾಗ ತಡೆಯಲು ಬಂದ ಚಾಸಾ-2 ರಾಘವೇಂದ್ರನಿಗೆ ನೀವು ಆರೋಪಿ-5 ರವರು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಆತನ ತಲೆಯ ಮುಂಭಾಗದಲ್ಲಿ ಚುಚ್ಚಿ ರಕ್ತಗಾಯ ಮಾಡಿ, ನೀವು ಆರೋಪಿ-4 ರವರು ಕಬ್ಬಿಣದ ರಾಡಿನಿಂದ ಹಾಗೂ ಕಲ್ಲಿನಿಂದ ಚಾಸಾ-3 ಲೋಹಿತರವರಿಗೆ ತಲೆಯ ಹಿಂಭಾಗ, ಎಡಗೈ ಹೆಬ್ಬೆರಳು ಹಾಗೂ ತೋರುಬೆರಳಿಗೆ ಹೊಡೆದು ಸಾಧಾರಣ ಸ್ವರೂಪದ ರಕ್ತಗಾಯ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324, 326 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಒಂಬತ್ತನೆಯದಾಗಿ ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-2 ಮತ್ತು 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ-1 ರವರಿಗೆ ಸೂಳೆಮುಂಡೆ ಎಂದು ಅವಾಚ್ಯ ಶಬ್ಧಗಳಿಂದ ಬೈದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಹತ್ತನೆಯದಾಗಿ ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-2 ಮತ್ತು 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ-1 ರವರ ಬಟ್ಟೆಗಳನ್ನು ಹಿಡಿದು ಎಳೆದಾಡಿ ಮಾನ ಹಾನಿ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಹನ್ನೊಂದನೆಯದಾಗಿ ಸದರಿ ದಿನ ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರ ಸದಸ್ಯರಾಗಿ ಚಾಸಾ-1 ರಿಂದ 3 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ-4 ರವರನ್ನು ಆರೋಪಿ-3 ರವರ ಜೊತೆ ಮದುವೆ ಮಾಡಿಕೊಳ್ಳಲು ಕಳುಹಿಸಿಕೊಡಿ ಎಂದು ಚಾಸಾ-1 ರಿಂದ 3 ರವರಿಗೆ ಬೆದರಿಕೆ ಹಾಕಿ ಚಾಸಾ-4 ರವರನ್ನು ಮನೆಯಿಂದ ಹೊರಗೆ ಎಳೆದುಕೊಳ್ಳುತ್ತಿದ್ದಾಗ ತಡೆಯಲು ಬಂದ ಚಾಸಾ-2 ರಾಘವೇಂದ್ರನಿಗೆ ನೀವು ಆರೋಪಿ-5 ರವರು ಚಾಕುವಿನಿಂದ ಆತನ ತಲೆಯ ಮುಂಭಾಗದಲ್ಲಿ

ಚುಚ್ಚಿ ರಕ್ತಗಾಯ ಮಾಡಿ ಟಿ-ಶರ್ಟ್ ಹರಿದು ಹಾಕಿ, ನೀವು ಆರೋಪಿ-4 ರವರು ಕಬ್ಬಿಣದ ರಾಡಿನಿಂದ ಹಾಗೂ ಕಲ್ಲಿನಿಂದ ಚಾಸಾ-3 ಲೋಹಿತ್‌ರವರಿಗೆ ತಲೆಯ ಹಿಂಭಾಗ, ಎಡಗೈ ಹೆಬ್ಬೆರಳು ಹಾಗೂ ತೋರುಬೆರಳಿಗೆ ಹೊಡೆದು ಸಾಧಾರಣ ಸ್ವರೂಪದ ರಕ್ತಗಾಯ ಮಾಡಿ ಬನಿಯನ್ ಹರಿದು ಹಾಕಿ, ಉಳಿದ ಆರೋಪಿತರಾದ ನೀವುಗಳು ಚಾಸಾ-2 ಮತ್ತು 3 ರವರಿಗೆ ಕೈಗಳಿಂದ ಮನಬಂದಂತೆ ಮೈಕೈಗೆಲ್ಲಾ ಹೊಡೆದು ನೋವುಂಟು ಮಾಡಿ ಕೊಲೆ ಮಾಡಲು ಪ್ರಯತ್ನಪಟ್ಟು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ನಾನು ಈ ಮೂಲಕ ಸದರಿ ಆರೋಪದ ಮೇಲೆ ವಿಚಾರಣೆಯಾಗಲು ನಿರ್ದೇಶಿಸುತ್ತೇನೆ.

ದಿಃ11.09.2023

**(ಶ್ರೀ ಕುಮಾರ್ ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.